ಇಂಜಿನಿಯರುಗಳ ಮುಷ್ಕರದಿಂದಾಗಿ ಎಲ್ಲಾ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾರ್ಯ ಸ್ಥಗಿತ

607 (767) ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಜಿನಿಯರುಗಳ ಮುಷ್ಕರದಿಂದಾಗಿ ಎಲ್ಲಾ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡು ಸಮಯಕ್ಕೆ ಸರಿಯಾಗಿ ಪೂರ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ.

ಆ) ಮುಷ್ಕರದ ಅವಧಿಯಲ್ಲಿ ಸ್ಥಗಿತಗೊಂಡಿರುವ ಇಲಾಖಾ ಅಭಿವೃದ್ಧಿ ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ಪೂರ್ತಿಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗುತ್ತಿಗೆ ಕಾಮಗಾರಿಗಳಿಗೆ ನಿಯಮದಂತೆ ಅವಧಿ ವಿಸ್ತರಣೆ ಬೇಕಾದಲ್ಲಿ ನೀಡಲಾಗುವುದು.

ಮುಳಬಾಗಿಲು ತಾಲ್ಲೂಕಿನಲ್ಲಿ ಇರುವ ಪಶುವೈದ್ಯ ಶಾಲೆಗಳ ಪ್ರಾರಂಭ.

610 (1019) ಶ್ರೀ ಆರ್.ಶ್ರೀನಿವಾಸ್ (ಮುಳಬಾಗಿಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಇರುವ ಪಶು ವೈದ್ಯ ಶಾಲೆಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಈ ತಾಲ್ಲೂಕಿನಲ್ಲಿ 1995ರಿಂದ ಇದುವರೆಗೆ ಎಷ್ಟು ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಇ) ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯುವ ಯೋಜನೆಯು ಸರ್ಕಾರದ ಮುಂದಿದೆಯೆ ?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 12.

ಆ) ಇಲ್ಲ.

ಇ) ಇದೆ.

ಮುಳಬಾಗಿಲು ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ನಡೆದ ಕಾಮಗಾರಿಗಳುಸ

611 (1020) ಶ್ರೀ ಆರ್. ಶ್ರೀನಿವಾಸ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?